11/1

# 2008

## LAW

## Paper 1

*Time : 3 Hours ]* *[ Maximum Marks : 300*

---

### INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* **three** *questions in Part D.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

1. (a) Indicate the tests for valid classification.

   (b) Mention the distinctive features of a Federal Constitution.

   (c) Explain the monistic theory under International Law.

   (d) State the nature of International Law.

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಸಿಂಧುವಾದ ವರ್ಗೀಕರಣ ಎಂದು ನಿರ್ಧರಿಸುವ ವಿವಿಧ ಪರೀಕ್ಷೆಗಳ ಬಗ್ಗೆ ತಿಳಿಸಿ.

(ಬಿ) ಸಂಯುಕ್ತ ಸಂವಿಧಾನದ ವಿಶಿಷ್ಟ ಲಕ್ಷಣಗಳನ್ನು ತಿಳಿಸಿ.

(ಸಿ) ಅಂತರರಾಷ್ಟ್ರೀಯ ಕಾನೂನಿನ ಪ್ರಕಾರ ಮಾನಿಸ್ಟಿಕ್ (monistic) ಸಿದ್ಧಾಂತವನ್ನು ವಿವರಿಸಿ.

(ಡಿ) ಅಂತರರಾಷ್ಟ್ರೀಯ ಕಾನೂನಿನ ಸ್ವರೂಪವನ್ನು ತಿಳಿಸಿ.

## PART B

*10×10=100*

*Answer each question in about 100 words. Each question carries 10 marks.*

2. Discuss briefly the principles of parliamentary form of Government.

3. Discuss the three types of amendments provided under the Indian Constitution.

4. Discuss the diverse jurisdictions of the High Court under the Indian Constitution.

5. Explain briefly the Fundamental Rights availa le to the detenue.

6. Write a note on principles of natural justice.

7. What is 'state succession' ? What is complete succession ?

8. What is meant by 'Statelessness' ?

9. Discuss the limitations placed on territorial jurisdiction.

10. Explain treaties as a source of International Law.

11. What is meant by intervention ? State the important elements of the definition.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

2. ಸಂಸದೀಯ ರೂಪದ ಸರ್ಕಾರದ ತತ್ವಗಳನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸಿ.

3. ಭಾರತದ ಸಂವಿಧಾನದ ಅಡಿಯಲ್ಲಿ ತಿಳಿಸಲಾಗಿರುವ ಮೂರು ವಿಧದ ತಿದ್ದುಪಡಿಗಳು ಯಾವುವು ? ಅವುಗಳಬಗ್ಗೆ ಚರ್ಚಿಸಿ.

4. ಭಾರತದ ಸಂವಿಧಾನದ ಅಡಿಯಲ್ಲಿ ತಿಳಿಸಿರುವಂತೆ ಉಚ್ಚ ನ್ಯಾಯಾಲಯದ ಬೇರೆ ಬೇರೆ ಅಧಿಕಾರ ವ್ಯಾಪ್ತಿಗಳನ್ನು ಕುರಿತು ಚರ್ಚಿಸಿ.

5. ಬಂಧಿತರಿಗೆ ಲಭ್ಯವಿರುವ ಮೂಲಭೂತ ಹಕ್ಕುಗಳನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸಿ.

6. ಸ್ವಾಭಾವಿಕ ನ್ಯಾಯದ ತತ್ವಗಳ ಬಗ್ಗೆ ಟಿಪ್ಪಣಿ ಬರೆಯಿರಿ.

7. 'ರಾಜ್ಯ ಉತ್ತರಾಧಿಕಾರ' ಎಂದರೇನು ? ಸಂಪೂರ್ಣ ಉತ್ತರಾಧಿಕಾರ ಎಂದರೇನು ?

8. 'ರಾಜ್ಯರಾಹಿತ್ಯತೆ' ಎಂದರೇನು ?

9. 'ಪ್ರಾದೇಶಿಕ ಅಧಿಕಾರವ್ಯಾಪ್ತಿ'ಯ ಮೇಲೆ ವಿಧಿಸಲಾದ ಮಿತಿಗಳ ಬಗ್ಗೆ ಚರ್ಚಿಸಿ.

10. ಅಂತರರಾಷ್ಟ್ರೀಯ ಕಾನೂನಿನ ಆಕರವಾಗಿ ಕೌಲುಗಳನ್ನು ಕುರಿತು ಬರೆಯಿರಿ.

11. ಮಧ್ಯ ಪ್ರವೇಶ ಎಂದರೇನು ? ಈ ವಿವರಣೆಯ ಮೂಲಾಂಶಗಳನ್ನು ನಿರೂಪಿಸಿ.

## PART C

*6×15=90*

*Answer each question in about 150 words. Each question carries 15 marks.*

**12.** (a) Discuss the concept of Gender Justice under the Indian Constitution in the context of Articles 14, 15 and 16.

(b) Note-4 of Goa Educational Dept. Services (Collegiate Education Dept.) Recruitment Rules 2008 provided for appointment of a woman as Principal of women colleges established by the Government. Mr. X, a seniormost member of the faculty challenges the constitutional validity of establishment of separate women's college and appointment of Miss Y, as the Principal of that college, on the grounds that these provisions are inconsistent with Articles 14, 15(1), 16(1) and 16(2). Decide.

**13.** (a) Explain the scope and content of Fundamental Rights of Minority Educational Institutions under Article 30(1) of the Constitution.

(b) In a college established by a religious minority, the appropriate Government issued an order to reserve 80% of seats for Government nominees, failing which recognition of the college will be withdrawn and grant-in-aid will be stopped. Discuss the constitutionality of the above order.

**14.** (a) Discuss the constitutional safeguards available to civil servants in case of dismissal, removal and reduction in rank. Are there any exceptions ?

(b) A, a member of Kolkata Police Force, whose appointing authority is Commissioner of Police, was dismissed by the order passed by the Deputy Commissioner of Police, under whom he was working. Decide the constitutionality of the action, if any.

**15.** (a) Explain the purpose of extradition.

(b) X, an Indian software engineer, serving in U.S.A., killed his wife in U.S.A. and escaped to India. American Government requests the Indian Government to extradite X for standing trial in U.S. courts. Can the Indian Government extradite its own national ?

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** (ಎ) ಅನುಚ್ಛೇದ 14, 15 ಮತ್ತು 16 ರ ಸಂದರ್ಭದಲ್ಲಿ, ಭಾರತದ ಸಂವಿಧಾನದ ಅಡಿಯಲ್ಲಿ ನೀಡಲಾಗಿರುವ ಲಿಂಗನ್ಯಾಯ ಪರಿಕಲ್ಪನೆ ಕುರಿತು ಚರ್ಚಿಸಿ.

(ಬಿ) ಸರ್ಕಾರದಿಂದ ಸ್ಥಾಪಿತವಾದ ಮಹಿಳಾ ಕಾಲೇಜುಗಳಲ್ಲಿ ಮಹಿಳೆಯರನ್ನು ಪ್ರಾಂಶುಪಾಲರಾಗಿ ನೇಮಿಸಿಕೊಳ್ಳಬೇಕೆಂಬ ಅವಕಾಶವನ್ನು ಗೋವ ಶಿಕ್ಷಣ ಇಲಾಖೆ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) ನೇಮಕಾತಿ ನಿಯಮಗಳು 2008, ಇದರ ಟಿಪ್ಪಣಿ-4 ರಲ್ಲಿ ತಿಳಿಸಲಾಗಿದೆ. ಕಾಲೇಜಿನ ಬೋಧಕ ವರ್ಗದಲ್ಲಿ ಅತ್ಯಂತ ಹಿರಿಯರಾದ ಶ್ರೀ X ಎಂಬುವವರು ಪ್ರತ್ಯೇಕ ಮಹಿಳಾ ಕಾಲೇಜುಗಳನ್ನು ಸ್ಥಾಪಿಸುವುದರ ಸಂವಿಧಾನಿಕ ಸಿಂಧುತ್ವವನ್ನು ಹಾಗೂ ಪ್ರಸ್ತುತ ಕಾಲೇಜಿನ ಪ್ರಾಂಶುಪಾಲರಾಗಿ ಶ್ರೀಮತಿ Y ಎಂಬುವವರ ನೇಮಕ ಮಾಡಿರುವುದನ್ನು ಈ ಅವಕಾಶಗಳು 14, 15(1), 16(1) ಮತ್ತು 16(2) ನೇ ಅನುಚ್ಛೇದಗಳಿಗೆ ಅನುಗುಣವಾಗಿಲ್ಲ ಎಂಬ ಆಧಾರದ ಮೇಲೆ ಪ್ರಶ್ನಿಸಿದ್ದಾರೆ. ನಿಮ್ಮ ತೀರ್ಮಾನ ತಿಳಿಸಿ.

**13.** (ಎ) ಸಂವಿಧಾನದ 30(1) ನೇ ಅನುಚ್ಛೇದದ ಅನ್ವಯ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಮೂಲಭೂತ ಹಕ್ಕುಗಳ ವ್ಯಾಪ್ತಿ ಮತ್ತು ಅದು ಒಳಗೊಂಡ ವಿಷಯವನ್ನು ವಿವರಿಸಿ.

(ಬಿ) ಒಂದು ಧಾರ್ಮಿಕ ಅಲ್ಪಸಂಖ್ಯಾತ ಸಂಸ್ಥೆಯಿಂದ ಸ್ಥಾಪಿತವಾದ ಕಾಲೇಜಿನಲ್ಲಿ 80% ಸ್ಥಾನಗಳನ್ನು ಸರ್ಕಾರದ ನಾಮನಿರ್ದೇಶಿತರಿಗೆ ಮೀಸಲಿರಿಸಬೇಕೆಂದೂ, ಇದಕ್ಕೆ ತಪ್ಪಿದರೆ ಕಾಲೇಜಿನ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲಾಗುವುದು ಮತ್ತು ಅನುದಾನವನ್ನು ನಿಲ್ಲಿಸಲಾಗುವುದು ಎಂದು ಸಮುಚಿತ ಸರ್ಕಾರವು ಒಂದು ಆದೇಶವನ್ನು ಹೊರಡಿಸಿತು. ಮೇಲ್ಕಂಡ ಆದೇಶದ ಸಂವಿಧಾನಬದ್ಧತೆ ಕುರಿತು ಚರ್ಚಿಸಿ.

**14.** (ಎ) ಕೆಲಸದಿಂದ ವಜಾಮಾಡುವುದು, ತೆಗೆದುಹಾಕುವುದು ಮತ್ತು ಶ್ರೇಣಿಯನ್ನು ಕಡಿಮೆ ಮಾಡುವುದು ಇಂಥ ಸಂದರ್ಭಗಳಲ್ಲಿ ಸಿವಿಲ್ ನೌಕರರಿಗೆ ಲಭ್ಯವಿರುವ ಸಂವಿಧಾನಬದ್ಧ ಸುರಕ್ಷಣಾ ಕ್ರಮಗಳನ್ನು ಕುರಿತು ಚರ್ಚಿಸಿ. ಇದಕ್ಕೆ ಏನಾದರೂ ಅಪವಾದಗಳಿವೆಯೆ ?

(ಬಿ) ಕೊಲ್ಕೊತ್ತ ಪೋಲೀಸ್ ದಳದಲ್ಲಿದ್ದ A ನೇಮಕಾತಿ ಅಧಿಕಾರಿ ಪೋಲೀಸ್ ಆಯುಕ್ತರು. ಆದರೆ A ಯು ಉಪ ಆಯುಕ್ತರ ಕೆಳಗೆ ಕೆಲಸಮಾಡುತ್ತಿದ್ದು, ಆತನನ್ನು ಉಪ ಆಯುಕ್ತರು ಒಂದು ಆದೇಶ ಹೊರಡಿಸಿ ವಜಾಮಾಡುತ್ತಾರೆ. ಈ ಕ್ರಮವು ಸಂವಿಧಾನಬದ್ಧವಾದುದೆ ?

**15.** (ಎ) ಪ್ರತ್ಯರ್ಪಣದ (Extradition) ಉದ್ದೇಶವೇನು ? ವಿವರಿಸಿ.

(ಬಿ) ಯು.ಎಸ್.ಎ. ಯಲ್ಲಿ ಸೇವೆಸಲ್ಲಿಸುತ್ತಿದ್ದ X ಎಂಬ ಭಾರತೀಯ ಸಾಫ್ಟ್‌ವೇರ್ ಇಂಜನಿಯರ್, ಯು.ಎಸ್.ಎ.ಯಲ್ಲಿ ತನ್ನ ಪತ್ನಿಯನ್ನು ಕೊಂದು ಭಾರತಕ್ಕೆ ಪಲಾಯನ ಮಾಡುತ್ತಾನೆ. ಯು.ಎಸ್.ಎ. ನ್ಯಾಯಾಲಯಗಳಲ್ಲಿ ಆತನ ವಿಚಾರಣೆ ನಡೆಸುವುದಕ್ಕಾಗಿ ಆತನನ್ನು ಪ್ರತ್ಯಾರ್ಪಣ ಮಾಡಬೇಕೆಂದು ಅಮೆರಿಕನ್ ಸರ್ಕಾರವು ಭಾರತ ಸರ್ಕಾರವನ್ನು ಕೋರುತ್ತದೆ. ತನ್ನ ರಾಷ್ಟ್ರದ ಈ ವ್ಯಕ್ತಿಯನ್ನು ಭಾರತ ಸರ್ಕಾರ ಪ್ರತ್ಯರ್ಪಣ ಮಾಡಬಹುದೆ ?

**16.** (a) What is meant by State responsibility ? State the consequences arising out of State responsibility.

(b) X, from State A, has hijacked an aircraft of State B and set fire to it. Can any responsibility be fixed on State A ? If yes, has State A any relief against X ?

**17.** (a) Explain the law relating to outer space.

(b) India desires to conduct exploration and use of outer space on Moon. Is there any law which allows this ? Are there any limitations on such use or exploration ?

**16.** (ಎ) ರಾಜ್ಯ ಜವಾಬ್ದಾರಿಕೆ ಎಂದರೇನು ? ರಾಜ್ಯ ಜವಾಬ್ದಾರಿಕೆಯಿಂದ ಉದ್ಭವಿಸುವ ಪರಿಣಾಮಗಳನ್ನು ನಿರೂಪಿಸಿ.

(ಬಿ) A ರಾಜ್ಯಕ್ಕೆ ಸೇರಿದ X ಎಂಬಾತನು B ರಾಜ್ಯದ ವಿಮಾನವನ್ನು ಅಪಹರಿಸಿ ಅದಕ್ಕೆ ಬೆಂಕಿಹಚ್ಚುತ್ತಾನೆ. ಇದಕ್ಕೆ A ರಾಜ್ಯದ ಮೇಲೆ ಯಾವುದಾದರೂ ಜವಾಬ್ದಾರಿ ಹೊರಿಸಬಹುದೆ ? ಹೌದಾದರೆ A ರಾಜ್ಯವು X ಗೆ ಪ್ರತಿಯಾಗಿ ಏನಾದರೂ ಪರಿಹಾರ (Relief) ಹೊಂದಿರುವುದೆ ?

**17.** (ಎ) ಬಾಹ್ಯಾಕಾಶಕ್ಕೆ ಸಂಬಂಧಿಸಿದ ಕಾನೂನನ್ನು ವಿವರಿಸಿ.

(ಬಿ) ಚಂದ್ರನ ಮೇಲೆ ಅನ್ವೇಷಣೆ ನಡೆಸಲು ಹಾಗೂ ಬಾಹ್ಯಾಕಾಶವನ್ನು ಬಳಸಿಕೊಳ್ಳಲು ಭಾರತ ದೇಶವು ಅಪೇಕ್ಷಿಸುತ್ತದೆ. ಇದಕ್ಕೆ ಅವಕಾಶ ಕೊಡುವಂತಹ ಯಾವುದಾದರೂ ಕಾನೂನು ಇದೆಯೆ ? ಇಂತಹ ಬಳಕೆ ಅಥವಾ ಅನ್ವೇಷಣೆಗಳಿಗೆ ಏನಾದರೂ ಮಿತಿಗಳಿವೆಯೆ ?

## PART D

*3×30=90*

*Answer any **three** of the following questions, each in about 300 words. Each question carries 30 marks.*

**18.** Discuss the nature of the Indian Constitution.

**19.** Discuss the scope of Right to Freedom of Press under the Indian Constitution.

**20.** Explain the doctrines invoked by the Supreme Court of India to resolve legislative conflicts between Centre and State.

**21.** Discuss the various peaceful means for the settlement of disputes available under International Law.

**22.** What is nationality ? How is it acquired and how is it lost ?

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಭಾರತೀಯ ಸಂವಿಧಾನದ ಸ್ವರೂಪವನ್ನು ಕುರಿತು ಚರ್ಚಿಸಿ.

**19.** ಭಾರತೀಯ ಸಂವಿಧಾನದ ಅಡಿಯಲ್ಲಿ, ಪತ್ರಿಕಾ ಸ್ವಾತಂತ್ರ್ಯದ ಅಧಿಕಾರವ್ಯಾಪ್ತಿ ಕುರಿತು ಚರ್ಚಿಸಿ.

**20.** ಕೇಂದ್ರ ಮತ್ತು ರಾಜ್ಯದ ನಡುವಿನ ಶಾಸನಾತ್ಮಕ ಸಂಘರ್ಷಗಳನ್ನು ಪರಿಹರಿಸಲು ಸರ್ವೋಚ್ಚ ನ್ಯಾಯಾಲಯವು ಯಾವ ಯಾವ ಸಿದ್ಧಾಂತಗಳನ್ನು ಆಹ್ವಾನಿಸುತ್ತದೆ ? ವಿವರಿಸಿ.

**21.** ಅಂತರರಾಷ್ಟ್ರೀಯ ಕಾನೂನಿನ ಅಡಿ ಬರುವ ವಿವಾದಗಳ ಇತ್ಯರ್ಥಕ್ಕೆ ಯಾವ ಯಾವ ಶಾಂತಿ ಮಾರ್ಗಗಳನ್ನು ಅನುಸರಿಸಲಾಗುತ್ತದೆ ? ಚರ್ಚಿಸಿ.

**22.** ರಾಷ್ಟ್ರೀಯತೆ ಎಂದರೇನು ? ಇದನ್ನು ಹೇಗೆ ಪಡೆದುಕೊಳ್ಳಲಾಗುತ್ತದೆ ಮತ್ತು ಇದನ್ನು ಹೇಗೆ ಕಳೆದುಕೊಳ್ಳಲಾಗುತ್ತದೆ ?

11/2

# 2008

## LAW

### Paper 2

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory****.*
*Answer any* ***three*** *questions in Part D.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

$4 \times 5 = 20$

*Answer each question in about 60 words. Each question carries 5 marks.*

**1.** (a) When does public nuisance turn into private nuisance ?

(b) What are the essentials of a valid contract ?

(c) State various modes of Abetment.

(d) What do you mean by endorsement ? What are its kinds ?

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 60 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

1\. (ಎ) ಸಾರ್ವಜನಿಕ ಉಪದ್ರವವು ಯಾವಾಗ ಖಾಸಗಿ ಉಪದ್ರವಕ್ಕೆ ತಿರುಗುತ್ತದೆ ?

(ಬಿ) ಸಿಂಧುವಾದ ಕರಾರಿನ ಅವಶ್ಯಕ ಅಂಶಗಳು ಯಾವುವು ?

(ಸಿ) ದುಷ್ಪ್ರೇರಣೆಯ ವಿವಿಧ ವಿಧಾನಗಳು ಯಾವುವು ?

(ಡಿ) ಹಿಂಬರಹ ಎಂದರೇನು ? ಇದರ ವಿವಿಧ ಬಗೆಗಳನ್ನು ತಿಳಿಸಿ.

## PART B

*10×10=100*

*Answer each question in about 110 words. Each question carries 10 marks.*

**2.** B, intended to steal an umbrella from a club of which he was a member. He opened the closet and took away an umbrella. Later, it turned out that the umbrella was his own which he had lost a week earlier. Discuss whether B has committed any offence.

**3.** A woman W dies in a collision of Motor Cycle and Bus, within seven years of her marriage, when she was pillion riding the motorcycle of her husband H. It is on record that W was 'feeling' harassed because of the behaviour of her mother-in-law HM towards her. W attributed the behaviour of HM to the poor status of W's father. It is also on record that H was rash and negligent in driving when the accident occurred. State whether H would be charged under Section 304 A or 304 B or both. Would H be deemed guilty and called upon to prove his innocence ?

**4.** Y prevented Z from entering a temple on the ground of "untouchability". Is Y liable under the Protection of Civil Rights Act, 1955 ?

**5.** 'X' took advice from a lawyer and then instituted prosecution against 'Z'. 'X' had not informed his lawyer about all the facts. The prosecution ended in favour of 'Z'. Can 'Z' now sue 'X' for malicious prosecution ?

**6.** List the offences against Human Body under IPC grading them from lesser offence to higher offence, stating their basis.

**7.** A, a minor, sold a shop to B. The consideration was paid to A but the sale deed could not be registered as A was a minor. B brought a suit for the recovery of the amount of consideration. Will B succeed ? Decide.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 110 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

2. B ಎಂಬಾತ, ತಾನು ಸದಸ್ಯನಾಗಿದ್ದ ಕ್ಲಬ್‌ನಿಂದ ಒಂದು ಛತ್ರಿಯನ್ನು ಕದಿಯಲು ಉದ್ದೇಶಿಸಿದ. ಶೌಚಗೃಹವನ್ನು ತೆರೆದು ಒಂದು ಛತ್ರಿಯನ್ನು ತೆಗೆದು ಕೊಂಡು ಹೋದ. ಆದರೆ ಅದು ತಾನು ಒಂದು ವಾರದ ಹಿಂದೆ ಕಳೆದು ಕೊಂಡಿದ್ದ ತನ್ನ ಛತ್ರಿಯೇ ಆಗಿದೆ ಎಂಬುದು ಅನಂತರ ಅವನಿಗೆ ತಿಳಿಯಿತು. B ಏನಾದರೂ ತಪ್ಪು ಮಾಡಿರುವನೆ ಎಂಬ ಬಗ್ಗೆ ಚರ್ಚಿಸಿ.

3. W ಎಂಬ ಮಹಿಳೆ ಮೋಟಾರ್ ಸೈಕಲ್‌ನಲ್ಲಿ H ಎಂಬ ತನ್ನ ಗಂಡನ ಹಿಂದೆ ಕುಳಿತು ಹೋಗುತ್ತಿದ್ದಾಗ ಮೋಟರ್ ಸೈಕಲ್ ಮತ್ತು ಬಸ್ ನಡುವೆ ಅಪಘಾತ ಸಂಭವಿಸಿ ಮೃತಳಾಗುತ್ತಾಳೆ. ಮೃತಳಾದಾಗ ಆಕೆಯ ಮದುವೆಯಾಗಿ ಏಳು ವರ್ಷಗಳೂ ಪೂರೈಸಿರುವುದಿಲ್ಲ. ಆಕೆ ತನ್ನ ಅತ್ತೆ HM ನ ವರ್ತನೆಯಿಂದ ಕಿರುಕುಳ ಅನುಭವಿಸುತ್ತಿದ್ದುದಾಗಿ ದಾಖಲೆಯಲ್ಲಿದೆ. ತನ್ನ ಅತ್ತೆ HM ನ ಈ ರೀತಿಯ ವರ್ತನೆಗೆ ತನ್ನ ತಂದೆಯ ಸ್ಥಿತಿಗತಿ ಹೀನವಾಗಿದ್ದುದೇ ಕಾರಣ ಎಂದು W ಹೇಳಿಕೆ. ಅಪಘಾತ ಸಂಭವಿಸಿದಾಗ H ತುಂಬಾ ದುಡುಕು ಹಾಗೂ ನಿರ್ಲಕ್ಷ್ಯದಿಂದ ಗಾಡಿ ಓಡಿಸುತ್ತಿದ್ದ ಎಂಬುದೂ ದಾಖಲೆಯಲ್ಲಿದೆ. H ಮೇಲೆ 304A ಅಥವಾ 304B ಅಥವಾ ಈ ಎರಡೂ ಅನುಚ್ಛೇದಗಳ ಪ್ರಕಾರ ಆರೋಪ ಹೊರಿಸಬಹುದೆ ? ತಿಳಿಸಿ. H ಅನ್ನು ತಪ್ಪಿತಸ್ಥ ಎಂದು ಭಾವಿಸಿ ತನ್ನ ನಿರ್ದೋಷಿತನವನ್ನು ಸಾಬೀತು ಪಡಿಸಲು ಕರೆಯಲಾಗುವುದೆ ?

4. 'ಅಸ್ಪೃಶ್ಯತೆ'ಯ ಕಾರಣದಿಂದ Y ಎಂಬಾತನು Z ಎಂಬಾತನನ್ನು ದೇವಾಲಯ ಪ್ರವೇಶಿಸದಂತೆ ತಡೆಯುತ್ತಾನೆ. 1955 ರ ನಾಗರಿಕ ಹಕ್ಕುಗಳ ರಕ್ಷಣಾ ಕಾಯಿದೆ ಅನ್ವಯ Y ಹೊಣೆಗಾರ ನಾಗುತ್ತನೆಯೆ ?

5. X ಎಂಬಾತನು ವಕೀಲರಿಂದ ಸಲಹೆ ಪಡೆದುಕೊಂಡ ನಂತರ Z ವಿರುದ್ಧ ಪ್ರಾಸಿಕ್ಯೂಶನ್ ಹೂಡುತ್ತಾನೆ. X ತನ್ನ ವಕೀಲರ ಬಳಿ ಎಲ್ಲ ತಥ್ಯಾಂಶಗಳನ್ನು ತಿಳಿಸಿರುವುದಿಲ್ಲ. ಹೀಗಾಗಿ ಪ್ರಾಸಿಕ್ಯೂಶನ್ Z ಪರವಾಗಿ ಕೊನೆಯಾಗುತ್ತದೆ. ದ್ವೇಷಪೂರ್ವಕ ಪ್ರಾಸಿಕ್ಯೂಶನ್‌ಗಾಗಿ X ವಿರುದ್ಧ Z ಮೊಕದ್ದಮೆ ಹೂಡಬಹುದೆ ?

6. IPC ಅನ್ವಯ ಮಾನವ ದೇಹದ ಮೇಲೆ ನಡೆಯುವ ಅಪರಾಧಗಳನ್ನು, ಕಡಿಮೆಯಿಂದ ಅಧಿಕ ಪ್ರಮಾಣದ ಅಪರಾಧ ಶ್ರೇಣಿಯಲ್ಲಿ ಪಟ್ಟಿಮಾಡಿ ಮತ್ತು ಯಾವ ಆಧಾರದಿಂದ ಈ ಶ್ರೇಣೀಕರಣ ಮಾಡಲಾಗಿದೆ ತಿಳಿಸಿ.

7. ಅಪ್ರಾಪ್ತ ವಯಸ್ಕ A ಎಂಬಾತನು B ಎಂಬಾತನಿಗೆ ಒಂದು ಅಂಗಡಿಯನ್ನು ಮಾರುತ್ತಾನೆ. ಮೌಲಿಕ ಪ್ರತಿಫಲವನ್ನು A ಗೆ ನೀಡಲಾಗುತ್ತದೆ. ಆದರೆ A ಅಪ್ರಾಪ್ತ ವಯಸ್ಕನಾದುದರಿಂದ ಮಾರಾಟದ ಕರಾರು ನೋಂದಣಿಯಾಗುವುದಿಲ್ಲ. ತಾನು ನೀಡಿದ ಪ್ರತಿಫಲದ ವಸೂಲಾತಿಗಾಗಿ B ದಾವೆಹಾಕುತ್ತಾನೆ ಆತ ಯಶಸ್ವಿಯಾಗುತ್ತಾನೆಯೆ ? ನಿರ್ಧರಿಸಿ.

[Turn over

**8.** P and G were partners in a business of renting and repairing cars. G was a sleeping partner. A clause in the partnership deed prohibited partners from buying and selling cars on behalf of the firm. P, the working partner, sold a car to which the firm had no title and received Rs. 47,000. When the buyer found that the seller had no title to sell, he claimed money from P and G both. P has in the meantime turned broke. Is G liable ? Give reasons for your answer.

**9.** A lady engaged a dentist to make two sets of artificial teeth to be fitted into her mouth. Before the work could be completed the lady died. Is this a contract of sale ? Can the doctor succeed in an action to recover the charges from the successors ? Decide giving reasons.

**10.** Distinguish between a material alteration and forgery in a negotiable instrument.

**11.** A supplies B, a lunatic, with necessaries suitable to B's condition in life. Is A entitled to be reimbursed ? Is B personally liable to reimburse A ?

8. P ಮತ್ತು G ಎಂಬುವವರು ಕಾರುಗಳನ್ನು ಬಾಡಿಗೆಗೆ ಕೊಡುವ ಮತ್ತು ರಿಪೇರಿ ಮಾಡುವ ವ್ಯವಹಾರವೊಂದರ ಪಾಲುದಾರರು, ಇದರಲ್ಲಿ G ನಿಷ್ಕ್ರಿಯ ಪಾಲುದಾರ. ಪಾಲುದಾರಿಕೆ ಕರಾರಿನ ಒಂದು ಉಪವಾಕ್ಯದ ಪ್ರಕಾರ ಈ ಪಾಲುದಾರರು ಉದ್ಯಮದ ಪರವಾಗಿ ಕಾರುಗಳನ್ನು ಕೊಳ್ಳವುದಾಗಲ್ಲೀ ಮಾರುವುದಾಗಲೀ ಮಾಡುವಂತಿಲ್ಲ. ಸಕ್ರಿಯ ಪಾಲುದಾರನಾದ P ಸಂಸ್ಥೆಗೆ ಸ್ವಾಮ್ಯವಿಲ್ಲದ ಒಂದು ಕಾರನ್ನು ಮಾರಾಟಮಾಡಿ 47,000 ರೂ. ಪಡೆದುಕೊಳ್ಳುತ್ತಾನೆ. ಇದನ್ನು ಮಾರಾಟ ಮಾಡುವ ಸ್ವಾಮ್ಯ ಮಾರಾಟಗಾರನಿಗೆ ಇಲ್ಲ ಎಂದು ಖರೀದಿಸಿದವನಿಗೆ ತಿಳಿದಾಗ ಆತ P ಮತ್ತು G ಇಬ್ಬರಿಂದಲೂ ಹಣಕ್ಕಾಗಿ ಅಹವಾಲು ಸಲ್ಲಿಸುತ್ತಾನೆ. ಈ ಮಧ್ಯೆ P ಯು ಪ್ರತ್ಯೇಕ ಗೊಂಡಿರುತ್ತಾನೆ. G ಹೊಣೆಯಾಗುತ್ತಾನೆಯೆ ? ನಿಮ್ಮ ಉತ್ತರವನ್ನು ಕಾರಣಗಳೊಂದಿಗೆ ನಿರೂಪಿಸಿ.

9. ಒಬ್ಬ ಮಹಿಳೆಯು ದಂತವೈದ್ಯರನ್ನು ನಿಗದಿಸಿಕೊಂಡು ತನ್ನ ಬಾಯಿಗೆ ಸರಿಹೊಂದುವಂತಹ ಎರಡು ಸೆಟ್ ಕೃತಕ ದಂತ ಪಂಕ್ತಿ ಮಾಡಿಕೊಡುವಂತೆ ತಿಳಿಸುತ್ತಾಳೆ. ಈ ಕೆಲಸ ಪೂರ್ಣ ಗೊಳ್ಳುವ ಮೊದಲೇ ಆಕೆ ಮೃತಳಾಗುತ್ತಾಳೆ. ಇದು ಮಾರಾಟದ ಕರಾರು ಆಗಿರುವುದೆ ? ಆಕೆಯ ಉತ್ತರಾಧಿಕಾರಿಗಳಿಂದ ಶುಲ್ಕಗಳನ್ನು ವಸೂಲುಮಾಡುವ ಕ್ರಮದಲ್ಲಿ ವೈದ್ಯನು ಯಶಸ್ವಿ ಯಾಗುತ್ತಾನೆಯೆ ? ಕಾರಣಗಳೊಂದಿಗೆ ನಿರ್ಧರಿಸಿ.

10. ವರ್ಗಾವಣೆಯ ಲಿಖಿತದಲ್ಲಿ, ಮುಖ್ಯ ಬದಲಾವಣೆ ಮತ್ತು ಫೋರ್ಜರಿಗಳಿಗಿರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಿ.

11. ಮನೋವಿಕಲನಾಗಿದ್ದ B ಗೆ ಆತನ ಜೀವನ ಸ್ಥಿತಿಗೆ ಸೂಕ್ತವಾದಂತಹ ಅಗತ್ಯ ವಸ್ತುಗಳನ್ನು A ಸರಬರಾಜು ಮಾಡುತ್ತಾನೆ. ಇದರ ಮರುಪಾವತಿ ಪಡೆಯುವ ಹಕ್ಕು A ಗೆ ಇದೆಯೆ ? ಮತ್ತು ವೈಯಕ್ತಿಕವಾಗಿ B ಯು A ಗೆ ಮರುಪಾವತಿ ಮಾಡಲು ಹೊಣೆಗಾರನಾಗುತ್ತಾನೆಯೆ ?

## PART C

*6×15=90*

*Answer each question in about 160 words. Each question carries 15 marks.*

**12.** An accused had succeeded in getting a decree of restitution of conjugal rights in his favour, but his wife was living separately and refused to rejoin him. He, thereupon, went to the place of the wife and there he had sex with his wife without her consent. The wife wants her husband to be prosecuted for the offence of rape and seeks your legal advice. What advice will you give her ?

**13.** What is 'Absolute Liability' under law of torts ? Are there any exceptions to it ? What are the factors which define measure of compensation in case of such liability ?

**14.** Explain 'adulterated' and 'misbranded' food under the Prevention of Food Adulteration Act, 1954 and differentiate between the two.

**15.** State the circumstances in which an agreement without consideration is valid.

**16.** What does "Unfair trade practices" mean under the Consumer Protection Act, 1986 ? Briefly explain any three such practices enumerated under the Act.

**17.** What is meant by "Implied authority" of an agent ?

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 160 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

12. ಒಬ್ಬ ಆರೋಪಿತ ವ್ಯಕ್ತಿಯು ತನ್ನ ಪರವಾಗಿ ದಾಂಪತ್ಯಾಧಿಕಾರ ಪುನಃ ಸ್ಥಾಪನೆಯ ಪೂರ್ವಸ್ಥಿತಿ ಪ್ರಾಪ್ತಿ ಡಿಕ್ರಿಯನ್ನು ಪಡೆಯುತ್ತಾನೆ. ಆದರೆ ಪ್ರತ್ಯೇಕವಾಗಿ ವಾಸಿಸುತ್ತಿದ್ದ ಆತನ ಪತ್ನಿ ಮತ್ತೆ ಅವನೊಂದಿಗೆ ಬಂದಿರಲು ನಿರಾಕರಿಸುತ್ತಾಳೆ. ಅನಂತರ ಅವನು ತನ್ನ ಹೆಂಡತಿಯಿದ್ದ ಸ್ಥಳಕ್ಕೆ ಹೋಗಿ ಆಕೆಯ ಒಪ್ಪಿಗೆಯಿಲ್ಲದೆಯೇ ಆಕೆಯೊಂದಿಗೆ ಲೈಂಗಿಕ ಕ್ರಿಯೆ ನಡೆಸುತ್ತಾನೆ. ಮಾನಭಂಗದ ಅಪರಾಧಕ್ಕಾಗಿ ಆತನ ಮೇಲೆ ವಿಚಾರಣೆ ನಡೆಸಬೇಕೆಂದು ಆಕೆ ಅಪೇಕ್ಷಿಸುತ್ತಾಳೆ ಮತ್ತು ಈ ಬಗ್ಗೆ ನಿಮ್ಮಿಂದ ಕಾನೂನು ಸಲಹೆ ಕೇಳುತ್ತಾಳೆ. ನೀವು ಏನು ಸಲಹೆ ನೀಡುತ್ತೀರಿ ?

13. ಅಪಕೃತ್ಯಗಳ ಕಾನೂನಿನ ಅನ್ವಯ ನಿರುಪಾಧಿಕ ಹೊಣೆಗಾರಿಕೆ ಎಂದರೇನು ? ಇದಕ್ಕೆ ಏನಾದರೂ ಅಪವಾದಗಳಿವೆಯೆ ? ಇಂತಹ ಹೊಣೆಗಾರಿಕೆಯ ಸಂದರ್ಭದಲ್ಲಿ ನಷ್ಟ ಪರಿಹಾರದ ಕ್ರಮವನ್ನು ನಿರೂಪಿಸುವ ಸಂಗತಿಗಳು ಯಾವುವು ?

14. ಆಹಾರ ಕಲಬೆರಕೆ ತಡೆಗಟ್ಟುವಿಕೆ ಅಧಿನಿಯಮ, 1954 ರ ಅನ್ವಯ 'ಕಲಬೆರಕೆಯ' ಮತ್ತು 'ತಪ್ಪಾಗಿ ಗುರುತುಹಾಕಿದ' ಆಹಾರಗಳು ಎಂದರೇನು ವಿವರಿಸಿ. ಇವೆರಡರ ವ್ಯತ್ಯಾಸಗಳನ್ನು ಸ್ಪಷ್ಟಪಡಿಸಿ.

15. ಪರ್ಯಾಲೋಚನೆಯಿಲ್ಲದೆ ಒಂದು ಒಪ್ಪಂದವು ಸಿಂಧುವಾಗಿರುವಂಥ ಸನ್ನಿವೇಶಗಳನ್ನು ನಿರೂಪಿಸಿ.

16. ಬಳಕೆದಾರರ ರಕ್ಷಣಾಕಾಯಿದೆ, 1986 ರ ಅನ್ವಯ "ನ್ಯಾಯಸಮ್ಮತವಲ್ಲದ ವ್ಯಾಪಾರ ಪದ್ಧತಿಗಳು" ಎಂದರೇನು ? ಈ ಕಾಯಿದೆಯ ಅಡಿಯಲ್ಲಿ ನಿರೂಪಿತವಾದ ಅಂತಹ ಯಾವುದಾದರೂ ಮೂರು ಪದ್ಧತಿಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.

17. ಒಬ್ಬ ಏಜೆಂಟರ "ಇಂಗಿತ ಅಧಿಕಾರ" ಎಂದರೇನು ?

[Turn over

## PART D

$3 \times 30 = 90$

*Answer any* ***three*** *of the following questions, each in about 320 words. Each question carries 30 marks.*

**18.** Bring out the difference between joint liability as laid down in Section 34 and Section 149 of the IPC. Is common intention the same thing as similar intention ?

Eight people assembled together and went to kill 'X'. Two of the members chased 'X' but X ran into his house. Thereafter out of frustration, these two persons gunned down the daughter of 'X' who was playing outside the house. Would all the eight members of the assembly be held liable for killing the girl ?

**19.** What is defamation ? What are the essentials of defamation ? What are the defenses to defamation ? Elucidate the difference in the Law of Crimes and Torts in this regard.

X in good faith published a false statement that Y had given birth to twins. In fact Y was married only two months back. Can X be held liable for defamation ?

**20.** (a) What is meant by frustration of contract ? Explain with the help of relevant case law.

(b) 'A' having place of business at Delhi offered to 'B' having business at Bangalore to sell 30 computer hard disks at the rate of Rs. 4000/- each. B informed his acceptance by e-mail at the Internet address of A (located at Delhi). A checks his mail server at Delhi and reads the e-mail and comes to know of the acceptance of his offer by B.

(i) State the place where the acceptance took place. Would it make any difference if A checks his mail while he was at Kolkata and comes to know of the acceptance by B at Kolkata ?

(ii) In the above problem, if B communicated acceptance on landline phone, state the place where the acceptance of the offer took place. Would it make any difference in your answer as to the place of acceptance, if B made the telephone call to A's mobile phone and acceptance of offer to A's mobile phone was received when A was roaming at Kolkata ?

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 320 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

18. ಭಾರತೀಯ ದಂಡ ಸಂಹಿತೆ 34 ಮತ್ತು 149 ನೇ ಪರಿಚ್ಛೇದಗಳ ಅಡಿಯಲ್ಲಿ ನಿರೂಪಿತವಾದಂತೆ ಜಂಟಿಹೊಣೆಗಾರಿಕೆ ನಡುವಿನ ವ್ಯತ್ಯಾಸವನ್ನು ತಿಳಿಸಿ. ಸಮಾನ ಉದ್ದೇಶ ಮತ್ತು ಒಂದೇ ರೀತಿಯ ಉದ್ದೇಶ ಇವೆರಡೂ ಒಂದೆಯೇ ?

    ಎಂಟು ಮಂದಿ ಒಟ್ಟಾಗಿ X ಎಂಬಾತನನ್ನು ಕೊಲ್ಲಲು ಹೋದರು. ಇದರಲ್ಲಿ ಇಬ್ಬರು X ನನ್ನು ಅಟ್ಟಿಸಿಕೊಂಡು ಹೋದರು. ಆದರೆ X ಮನೆಯೊಳಗೆ ಓಡಿಹೋದ. ಆಗ ಅಟ್ಟಿಸಿಕೊಂಡು ಹೋದವರಿಬ್ಬರೂ ಹತಾಶರಾಗಿ, ಮನೆಯ ಮುಂದೆ ಆಡುತ್ತಿದ್ದ X ನ ಮಗಳನ್ನು ಗುಂಡಿಟ್ಟು ಕೊಂದರು. ಈ ಹುಡುಗಿಯನ್ನು ಕೊಂದಿದ್ದಕ್ಕೆ, ಒಟ್ಟಾಗಿ ಹೊರಟಿದ್ದ ಎಂಟು ಮಂದಿಯೂ ಹೊಣೆಗಾರರಾಗುತ್ತಾರೆಯೆ ?

19. ಮಾನನಷ್ಟ ಎಂದರೇನು ? ಇದರಲ್ಲಿರುವ ಅಗತ್ಯ ಅಂಶಗಳು ಯಾವುವು ? ಮಾನನಷ್ಟಕ್ಕೆ ಯಾವ ಯಾವ ಪ್ರತಿರಕ್ಷಣೆಗಳಿವೆ ? ಈ ಸಂಬಂಧವಾಗಿ ಅಪರಾಧಗಳ ಕಾನೂನು ಮತ್ತು ಅಪಕೃತ್ಯಗಳ ಕಾನೂನಿನಲ್ಲಿರುವ ವ್ಯತ್ಯಾಸಗಳನ್ನು ವಿವರಿಸಿ.

    Y ಅವಳಿಜವಳಿಗೆ ಜನ್ಮ ಕೊಟ್ಟಿದ್ದಾರೆ ಎಂದು X ಸದ್ಭಾವನೆಯಿಂದಲೇ ಸುಳ್ಳು ಹೇಳಿಕೆಯನ್ನು ಪ್ರಕಟಿಸಿದ. ಆದರೆ Y ಕೇವಲ ಎರಡು ತಿಂಗಳ ಹಿಂದೆಯಷ್ಟೇ ಮದುವೆಯಾಗಿದ್ದರು. X ಅನ್ನು ಮಾನನಷ್ಟ ಮೊಕದ್ದಮೆಗೆ ಗುರಿಪಡಿಸಬಹುದೆ.

20. (a) ಕರಾರಿನ ನಿಷ್ಫಲತೆ ಎಂದರೇನು ? ಸಂಬಂಧಪಟ್ಟ ಕಾನೂನು ಪ್ರಕರಣದ ನೆರವಿನಿಂದ ವಿವರಿಸಿ.

    (b) ದೆಹಲಿಯಲ್ಲಿ ತನ್ನ ವ್ಯವಹಾರ ಸ್ಥಳವನ್ನು ಹೊಂದಿದ್ದ A, ಬೆಂಗಳೂರಿನಲ್ಲಿ ವ್ಯವಹಾರ ಹೊಂದಿದ್ದ B ಗೆ ಪ್ರತಿಯೊಂದಕ್ಕೆ 4,000 ರೂ.ಗಳತೆ 30 ಕಂಪ್ಯೂಟರ್ ಹಾರ್ಡ್ ಡಿಸ್ಕ್‌ಗಳನ್ನು ಮಾರಾಟ ಮಾಡಲು ಪ್ರಸ್ತಾಪಿಸಿದ. B ಯು ತನ್ನ ಸಮ್ಮತಿಯನ್ನು ಇ ಅಂಚೆ ಮೂಲಕ A ಯ ಅಂತರ್ಜಾಲ ವಿಳಾಸಕ್ಕೆ (ದೆಹಲಿಯಲ್ಲಿದ್ದ) ಕಳುಹಿಸಿದ. A ಯು ದೆಹಲಿಯಲ್ಲಿದ್ದ ತನ್ನ ಅಂಚೆ ಸರ್ವರ್ ಅನ್ನು ಪರಿಶೀಲಿಸಿ ಇ ಅಂಚೆಯನ್ನು ಓದಿಕೊಂಡು B ತನ್ನ ಪ್ರಸ್ತಾವವನ್ನು ಅಂಗೀಕರಿಸಿರುವುದನ್ನು ತಿಳಿದುಕೊಂಡ.

    (i) ಅಂಗೀಕಾರ ನಡೆದ ಸ್ಥಳ ಯಾವುದು ಎಂಬುದನ್ನು ತಿಳಿಸಿ. A ಯು ಕೊಲ್ಕೊತ್ತದಲ್ಲಿದ್ದಾಗ ತನ್ನ ಅಂಚೆಯನ್ನು ಪರಿಶೀಲಿಸಿ, B ಯ ಅಂಗೀಕಾರವನ್ನು ಕೊಲ್ಕೊತ್ತದಲ್ಲಿ ತಿಳಿದುಕೊಂಡರೆ ಏನಾದರೂ ವ್ಯತ್ಯಾಸವಾಗುವುದೆ ?

    (ii) ಮೇಲಿನ ಸಮಸ್ಯೆಯಲ್ಲಿ, B ಯು ತನ್ನ ಅಂಗೀಕಾರವನ್ನು ಸ್ಥಿರದೂರವಾಣಿಯ ಮೂಲಕ ತಿಳಿಸಿದ್ದರೆ – ಅಂಗೀಕಾರ ಯಾವ ಸ್ಥಳದಲ್ಲಿ ನಡೆಯಿತು ಎಂಬುದನ್ನು ತಿಳಿಸಿ. B ಯು A ಯ ಸಂಚಾರಿ ದೂರವಾಣಿಗೆ ದೂರವಾಣಿಕರೆ ನೀಡಿದ್ದರೆ ಮತ್ತು A ಯು ಕೊಲ್ಕೊತ್ತದಲ್ಲಿ ಓಡಾಡುತ್ತಿದ್ದಾಗ A ಯ ಸಂಚಾರಿದೂರವಾಣಿಯಲ್ಲಿ ಪ್ರಸ್ತಾಪದ ಅಂಗೀಕಾರ ಸ್ವೀಕೃತವಾಗಿದ್ದರೆ, ಅಂಗೀಕಾರದ ಸ್ಥಳಕ್ಕೆ ಸಂಬಂಧಿಸಿದಂತೆ ನಿಮ್ಮ ಉತ್ತರದಲ್ಲಿ ಏನಾದರೂ ವ್ಯತ್ಯಾಸವಾಗುವುದೆ ?

[Turn over

21. 'A' orders his supplier 'S' located at Cuttack to despatch goods to Bangalore for his buyer 'B' by Rail and instructs that in the Railway Receipt 'A' should be shown as consignee. 'A' endorses the Railway Receipt covering the goods, in which he is the consignee, in favour of – "To the order of Bankers of B" and sends the same to B's Bankers together with the bill of exchange drawn by 'A' on 'B'.

In due time the bankers of 'B' present the documents to 'B' for acceptance of the bill of exchange drawn by 'A' on 'B'.

(i) Who is the owner of goods after 'S' dispatched the goods showing 'A' as consignee in the Railway Receipt under the Sale of Goods Act, 1930 as between S and A ?

(ii) Whether and When the goods dispatched by 'S' would be deemed to be appropriated to the contract between 'A' and 'B' ?

(iii) Whether and When the goods would be deemed to have been delivered to 'B' ?

(iv) Whether there is vested in 'A', a right of disposal of goods after the dispatch of documents to the B's Bankers ? If yes, when would this right of disposal terminate ?

(v) If 'B' does not honour the bill of exchange, who shall be owner of goods after such dishonour of the bill of exchange by 'B' ?

**22.** (a) Under what circumstances may a partnership firm be dissolved by the intervention of the court ?

(b) A partner of a firm of bankers committed adultery with several women in the city where banking business was carried on. His wife had also left him. Other partners applied for dissolution of partnership on this ground. Can the court dissolve the firm on this ground ?

21. ಕಟಕ್‌ನಲ್ಲಿರುವ ತನ್ನ ಸರಬರಾಜುದಾರ 'S' ಗೆ ಬೆಂಗಳೂರಿನಲ್ಲಿರುವ ತನ್ನ ಖರೀದಿದಾರ 'B' ಗೆ ರೈಲಿನ ಮೂಲಕ ಸರಕುಗಳನ್ನು ರವಾನಿಸುವಂತೆ 'A' ಆದೇಶಿಸುತ್ತಾನೆ ಮತ್ತು ರೈಲ್ವೆ ರಶೀತಿಯಲ್ಲಿ 'A' ಯನ್ನು ರವಾನೆದಾರನಾಗಿ ತೋರಿಸಬೇಕೆಂದು ಸೂಚನೆ ನೀಡುತ್ತಾನೆ. 'A' ಯು ತಾನು ರವಾನೆದಾರನಾಗಿರುವ ಸರಕುಗಳಿಗೆ ಸಂಬಂಧಿಸಿದ ರೈಲ್ವೆ ರಶೀತಿಯಲ್ಲಿ "To the order of Bankers of B" ಪರವಾಗಿ ಹಿಂಬರಹ ಬರೆದು ಅದನ್ನು 'B' ಪರವಾಗಿ 'A' ಪಡೆದ ಬಿಲ್ ಆಫ್ ಎಕ್ಸ್‌ಚೇಂಜ್ ನೊಂದಿಗೆ 'B' ಬ್ಯಾಂಕರ್‌ಗಳಿಗೆ ಕಳಿಸುತ್ತಾನೆ.

ಸೂಕ್ತಕಾಲದಲ್ಲಿ 'B' ಯ ಬ್ಯಾಂಕರ್‌ಗಳು 'B' ಯ ಪರವಾಗಿ 'A' ಪಡೆದ ಬಿಲ್ ಆಫ್ ಎಕ್ಸ್‌ಚೇಂಜ್‌ನ ಅಂಗೀಕಾರಕ್ಕಾಗಿ 'B' ಗೆ ದಸ್ತಾವೇಜುಗಳನ್ನು ಸಲ್ಲಿಸುತ್ತಾರೆ.

(i) ರೈಲ್ವೆ ರಶೀತಿಯಲ್ಲಿ 'A' ಯನ್ನು ರವಾನೆದಾರನಾಗಿ ತೋರಿಸಿ ಸರಕುಗಳನ್ನು 'S' ರವಾನಿಸಿದ ನಂತರ 1930 ರ ಸರಕುಗಳ ಮಾರಾಟ ಅಧಿನಿಯಮದ ಅಡಿಯಲ್ಲಿ, A ಮತ್ತು B ಯಲ್ಲಿ ಯಾರು ಸರಕುಗಳ ಮಾಲೀಕರಾಗುತ್ತಾರೆ ?

(ii) 'S' ನಿಂದ ರವಾನೆಯಾದ ಸರಕುಗಳನ್ನು 'A' ಮತ್ತು 'B' ನಡುವಿನ ಕರಾರಿಗೆ ಹೊಂದಾಣಿಕೆ ಎಂದು ಭಾವಿಸಬೇಕೆ ಮತ್ತು ಯಾವಾಗ ?

(iii) 'B' ಗೆ ಸರಕುಗಳನ್ನು ಬಟವಾಡೆ ಯಾರವು ಎಂದು ಭಾವಿಸಬೇಕೆ ಮತ್ತು ಯಾವಾಗ ?

(iv) 'B' ಯ ಬ್ಯಾಂಕರ್‌ಗಳಿಗೆ ದಸ್ತಾವೇಜುಗಳನ್ನು ರವಾನಿಸಿದನಂತರ, 'A' ಯಲ್ಲಿ ಸರಕುಗಳ ವಿಲೇವಾರಿಯ ಹಕ್ಕು ವಿಹಿತವಾಗಿರುತ್ತದೆಯೆ ? ಹೌದಾದಲ್ಲಿ, ಈ ವಿಲೇವಾರಿಯ ಹಕ್ಕು ಯಾವಾಗ ಕೊನೆಗೊಳ್ಳುತ್ತದೆ ?

(v) 'B' ಯು ಬಿಲ್ ಆಫ್ ಎಕ್ಸ್‌ಚೇಂಜ್ ಅನ್ನು ಮಾನ್ಯ ಮಾಡದಿದ್ದರೆ, 'B' ಯು ಹೀಗೆ ಅದನ್ನು ಅಮಾನ್ಯ ಮಾಡಿದ ನಂತರ ಸರಕುಗಳಿಗೆ ಯಾರು ಮಾಲೀಕರೆನಿಸಿಕೊಳ್ಳುತ್ತಾರೆ ?

22. (a) ಒಂದು ಪಾಲುದಾರಿಕೆ ಉದ್ದಿಮೆಯು ನ್ಯಾಯಾಲಯದ ಮಧ್ಯಪ್ರವೇಶದಿಂದ ಯಾವ ಸಂದರ್ಭಗಳಲ್ಲಿ ವಿಸರ್ಜನೆಯಾಗಬಹುದು ?

(b) ಬ್ಯಾಂಕರುಗಳ ಉದ್ದಿಮೆಯ ಪಾಲುದಾರನೊಬ್ಬನು ಬ್ಯಾಂಕಿನ ವ್ಯವಹಾರ ನಡೆಯುತ್ತಿದ್ದ ನಗರದಲ್ಲಿ ಅನೇಕ ಸ್ತ್ರೀಯರೊಂದಿಗೆ ವ್ಯಭಿಚಾರ ನಡೆಸುತ್ತಾನೆ. ಆತನ ಹೆಂಡತಿಯೂ ಆತನನ್ನು ಬಿಟ್ಟು ಹೋಗಿರುತ್ತಾಳೆ. ಈ ಆಧಾರದ ಮೇಲೆ ಇತರ ಪಾಲುದಾರರು ಪಾಲುದಾರಿಕೆಯನ್ನು ವಿಸರ್ಜಿಸಬೇಕೆಂದು ಅರ್ಜಿ ಸಲ್ಲಿಸುತ್ತಾರೆ. ಈ ಆಧಾರದ ಮೇಲೆ ನ್ಯಾಯಾಲಯವು ಉದ್ದಿಮೆಯನ್ನು ವಿಸರ್ಜಿಸುವುದೆ ?